# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : 449 |
| ವಿಧಾನ ಪರಿಷತ್ತಿನ ಸದಸ್ಯರ ಹೆಸರು | : ಶ್ರೀ ನಿರಾಣಿ ಹಣಮಂತ್‌ರುದ್ರಪ್ಪ (ಪದವೀಧರರ ಕ್ಷೇತ್ರದಿಂದ) |
| ಉತ್ತರಿಸಬೇಕಾದ ದಿನಾಂಕ | : 12.12.2024 |
| ಉತ್ತರಿಸಬೇಕಾದ ಸಚಿವರು | : ಮಾನ್ಯ ಉಪ ಮುಖ್ಯಮಂತ್ರಿಗಳು |

| ಕ್ರ. ಸಂ. | ಪ್ರಶ್ನೆಗಳು | ಉತ್ತರಗಳು |
|---|---|---|
| (ಅ) | ವಿಜಯಪುರ, ಬಾಗಲಕೋಟೆ ಜಿಲ್ಲೆಗಳಲ್ಲಿ ಕೈಗೊಂಡಿರುವ ಏತ ನೀರಾವರಿ (ಹನಿ ನೀರಾವರಿ ಮಾತ್ರ) ಯೋಜನೆಗಳಾವುವು: (ಸಂಪೂರ್ಣ ಮಾಹಿತಿ ನೀಡುವುದು) | ಜಲ ಸಂಪನ್ಮೂಲ ಇಲಾಖೆಯಡಿ ಬಾಗಲಕೋಟೆ ಜಿಲ್ಲೆ ಹುನಗುಂದ ತಾಲ್ಲೂಕಿನಲ್ಲಿ ರಾಮಥಾಳ (ಮರೋಳ್) ಏತ ನೀರಾವರಿ ಯೋಜನೆಯಡಿ ಮೂಲತಃ ಹರಿ ನೀರಾವರಿ (Flow irrigation) ಪದ್ಧತಿ ಅನುಸರಿಸಿ 26,000 ಹೆಕ್ಟೇರ್ ಅಚ್ಚುಕಟ್ಟು ಕ್ಷೇತ್ರಕ್ಕೆ 5.84 ಟಿಎಂಸಿ ನೀರಿನ ಬಳಕೆಯೊಂದಿಗೆ 2 ಹಂತಗಳಲ್ಲಿ ನಾರಾಯಣಪುರ ಜಲಾಶಯದ ಹಿನ್ನೀರಿನಲ್ಲಿ ನೀರನ್ನು ಲಿಫ್ಟ್ ಮಾಡಿ, ನೀರಾವರಿ ಸೌಲಭ್ಯ ಕಲ್ಪಿಸುವ ಯೋಜನೆಯನ್ನು ಉದ್ದೇಶಿಸಲಾಗಿತ್ತು.<br>ಈ ಯೋಜನೆಯ 1ನೇ ಹಂತದಡಿ ಹರಿ ನೀರಾವರಿ (Flow irrigation) ಪದ್ಧತಿಯನ್ನು ಅಳವಡಿಸಿ, ಕಾಮಗಾರಿಯನ್ನು ಪೂರ್ಣಗೊಳಿಸಿ, 14,493 ಹೆಕ್ಟೇರ್ ಕ್ಷೇತ್ರ ಅಧಿಸೂಚನೆಗೊಳಿಸಿ, ನೀರಾವರಿ ಸೌಲಭ್ಯ ಕಲ್ಪಿಸಲಾಗಿದೆ.<br>ಯೋಜನೆಯ 2ನೇ ಹಂತದಡಿ ಹರಿ ನೀರಾವರಿ ಪದ್ಧತಿ (Flow irrigation) ಬದಲಾಗಿ ಹನಿ ನೀರಾವರಿ (Drip irrigation) ಪದ್ಧತಿಯನ್ನು ಅಳವಡಿಸಿ, ಹುನಗುಂದ ತಾಲ್ಲೂಕಿನ ಸುಮಾರು 24,000 ಹೆಕ್ಟೇರ್ ಕ್ಷೇತ್ರಕ್ಕೆ ನೀರಾವರಿ ಸೌಲಭ್ಯ ಒದಗಿಸುವ 2 ಪ್ಯಾಕೇಜ್ ಕಾಮಗಾರಿಗಳನ್ನು ಟರ್ನ್ ಕೀ ಆಧಾರದ ಮೇಲೆ ಗುತ್ತಿಗೆ ವಹಿಸಿದ್ದು, ಈಗಾಗಲೇ ಕಾಮಗಾರಿಗಳು ಪೂರ್ಣಗೊಂಡಿದ್ದು, ಪ್ರಸ್ತುತ, ಸದರಿ ಹನಿ ನೀರಾವರಿ (Drip irrigation) ಯೋಜನೆಯ ಪಾಲನೆ ಮತ್ತು ಪೋಷಣೆಯನ್ನು (O & M) ಟೆಂಡರ್ ಕರಾರಿನಂತೆ ಮೂಲ ಗುತ್ತಿಗೆದಾರರು ನಿರ್ವಹಿಸುತ್ತಿದ್ದಾರೆ.<br>ವಿಜಯಪುರ ಜಿಲ್ಲೆಯಲ್ಲಿ ಯಾವುದೇ ಹನಿ ನೀರಾವರಿ (Drip irrigation) ಯೋಜನೆಗಳನ್ನು ಕೈಗೊಂಡಿರುವುದಿಲ್ಲ. |
| (ಆ) | ಈ ಯೋಜನೆಯಲ್ಲಿ ಹನಿ ನೀರಾವರಿಯನ್ನು ಅಳವಡಿಸಿಕೊಂಡು ಸದ್ಬಳಕೆ ಮಾಡುವ ಬಗ್ಗೆ ರೈತರಲ್ಲಿ ಜಾಗೃತಿ ಮೂಡಿಸುವ ಕಾರ್ಯಯಾರು ನಿರ್ವಹಿಸುತ್ತಾರೆ: (ಮಾಹಿತಿ ನೀಡುವುದು) | ರಾಮಥಾಳ ಏತ ನೀರಾವರಿ ಯೋಜನೆಯ ಹಂತ-2ರ ಮೂಲ ಗುತ್ತಿಗೆ ಕರಾರು ಒಪ್ಪಂದದನ್ವಯ ಕಾಮಗಾರಿ ಪೂರ್ಣಗೊಂಡ ನಂತರದ 5 ವರ್ಷಗಳ ನಿರ್ವಹಣೆ ಮತ್ತು ಪೋಷಣೆ ಕಾಲಾವಧಿಯಲ್ಲಿ ಈ ಯೋಜನೆಯಡಿ ಬರುವ ರೈತರಿಗೆ ತರಬೇತಿ, ಸಂವಹನೆ (Communication), ಗ್ರಾಮ ಸಭೆ, ಸಾಕ್ಷ್ಯಚಿತ್ರ, ಬೀದಿ ನಾಟಕ, ಜನಪದ ಗೀತೆಗಳು, ಕಿರುಚಿತ್ರ ಹಾಗೂ ಪ್ರಾತ್ಯಕ್ಷತೆಗಳ ಮೂಲಕ ಸಮರ್ಪಕವಾಗಿ ಕಾರ್ಯಕ್ರಮಗಳನ್ನು ಅಳವಡಿಸಿಕೊಂಡು ರೈತರಲ್ಲಿ ಜಾಗೃತಿ ಮೂಡಿಸಲು ಕ್ರಮ ಕೈಗೊಳ್ಳಲಾಗಿರುತ್ತದೆ.<br>ಇದಲ್ಲದೇ, ಸದರಿ ಯೋಜನೆಯು ಸಂಪೂರ್ಣ ರೈತರ ಸಹಭಾಗಿತ್ವದಿಂದ ಯಶಸ್ವಿಯಾಗಿ ಮುಂದುವರೆಸಿಕೊಂಡು ಹೋಗಲು ರೈತರಿಗೆ ಇಲಾಖಾ ಅಧಿಕಾರಿಗಳಿಂದ ಮನವರಿಕೆ ಮಾಡಿಕೊಡಲಾಗುತ್ತಿದೆ. |

| ಕ್ರ ಸಂ | ಪ್ರಶ್ನೆಗಳು | ಉತ್ತರಗಳು |
|---|---|---|
| | | ಮುಂದುವರೆದು, ಸದರಿ ಯೋಜನೆಗೆ ಪೂರಕವಾಗಿ ಜಲಸಂಪನ್ಮೂಲ ಇಲಾಖೆಯಡಿ ಬರುವ ಜಲ ಮತ್ತು ನೆಲ ನಿರ್ವಹಣೆ ಸಂಸ್ಥೆಯೂ (WALMI) ಧಾರವಾಡ ಸಹ ಹನಿ ನೀರಾವರಿ ಪದ್ಧತಿಯ ಬಗ್ಗೆ ರೈತರಲ್ಲಿ ಜಾಗೃತಿ ಮೂಡಿಸುವ ಕ್ರಮಗಳನ್ನು ಕೈಗೊಂಡಿರುತ್ತದೆ. |
| ಇ) | ರೈತರಿಗೆ ಹನಿ ನೀರಾವರಿ ಅಳವಡಿಸಿಕೊಳ್ಳಲು ನೀಡಿದ ಪರಿಕರಗಳು ಮತ್ತು ಭೂಮಿಯಲ್ಲಿ ಅಳವಡಿಸಿದ ಪೈಪುಗಳಲ್ಲಿ ಏನಾದರೂ ಸಮಸ್ಯೆ ಬಂದರೆ ಇದನ್ನು ಯಾರು ನಿಭಾಯಿಸುತ್ತಾರೆ. ಈ ಏತ ನೀರಾವರಿ ಯೋಜನೆಗಳು ಪೂರ್ಣಗೊಂಡ ಮೇಲೆ ಅದರ ಮೇಲ್ವಿಚಾರಣೆ ಮಾಡುವ ಕೆಲಸ ಯಾರದ್ದು: (ಸಂಪೂರ್ಣ ಮಾಹಿತಿ ನೀಡುವುದು) | ರಾಮಥಾಳ ಏತ ನೀರಾವರಿ ಯೋಜನೆಯ ಹಂತ-2ರ ಹನಿ ನೀರಾವರಿ ಪದ್ಧತಿ ಅಳವಡಿಸಿ ಕೈಗೆತ್ತಿಕೊಂಡ ಕಾಮಗಾರಿಗಳಡಿ ಮೂಲ ಗುತ್ತಿಗೆ ಕರಾರು ಒಪ್ಪಂದದನ್ವಯ ಗುತ್ತಿಗೆ ಅವಧಿಯಲ್ಲಿ ಮತ್ತು ಕಾಮಗಾರಿ ಪೂರ್ಣಗೊಂಡ ನಂತರದ 5 ವರ್ಷಗಳ ನಿರ್ವಹಣೆ ಮತ್ತು ಪೋಷಣೆ ಕಾಲಾವಧಿಯಲ್ಲಿ ಮಾತ್ರ ಮೂಲ ಗುತ್ತಿಗೆದಾರರು ಸದರಿ ಯೋಜನಾ ಪ್ರದೇಶದಲ್ಲಿ ಕಾಮಗಾರಿಯಲ್ಲಿ ಅಳವಡಿಸಲಾದ ಪೈಪ್‌ಲೈನ್ ಮತ್ತು ಅದಕ್ಕೆ ಸಂಬಂಧಿಸಿದ ಪರಿಕರಗಳು ಹಾನಿಗೊಳಗಾದಲ್ಲಿ ದುರಸ್ಥಿಗೊಳಿಸಲು ಕರಾರು ಒಪ್ಪಂದದಲ್ಲಿ ಅಳವಡಿಸಲಾಗಿದೆ.<br><br>ಸದರಿ ಮೇಲ್ವಿಚಾರಣೆಯನ್ನು ಕೃಷ್ಣಾ ಭಾಗ್ಯ ಜಲ ನಿಗಮವು ನಿರ್ವಹಿಸುತ್ತದೆ. |
| ಈ) | ಹನಿ ನೀರಾವರಿ ಪದ್ಧತಿಯನ್ನು ಮುಂದುವರೆಸಿಕೊಂಡು ಹೋಗುವ ಬಗ್ಗೆ ರೈತರಲ್ಲಿ ಯಾವ ತರವಾದ ಜಾಗೃತಿ ಮಾಡಲಾಗುತ್ತಿದೆ: | ಸದರಿ ಯೋಜನೆಯನ್ನು ಮುಂದುವರೆಸಿಕೊಂಡು ಹೋಗಲು 58 ಸಂಖ್ಯೆ ನೀರು ಬಳಕೆದಾರರ ಸಹಕಾರಿ ಸಂಘಗಳನ್ನು ರಚನೆ ಮಡಲಾಗಿದ್ದು, ಅವುಗಳೊಂದಿಗೆ ವಾಲ್ಮೀ, ಧಾರವಾಡ ಇವರು ಜಾಗೃತಿ ಮೂಡಿಸುವ ಕಾರ್ಯಕ್ರಮಗಳನ್ನು ರೂಪಿಸಿ ನಿಗಮದ ಸಹಭಾಗಿತ್ವದಲ್ಲಿ ಮುಂದಿನ ದಿನಗಳಲ್ಲಿ ರೈತರಲ್ಲಿ ಜಾಗೃತಿ ಮೂಡಿಸಲಾಗುತ್ತದೆ. |
| ಉ) | ಕೆಲವೊಂದು ಏತ ನೀರಾವರಿ ಕಾಮಗಾರಿಗಳಲ್ಲಿ ಕಳಪೆ ಕಾಮಗಾರಿ ಮಾಡಿರುವುದು, ಕಾಮಗಾರಿ ಮಾಡಿದ ನಂತರ ರೈತರಿಗೆ ನೀಡಿದ ಪೈಪುಗಳು ಕಳಪೆ ಗುಣಮಟ್ಟದಿಂದ ಕೂಡಿರುವುದು, ಬೇಗ ಹಾಳಾಗಿರುವುದು. ರೈತರು ತಮ್ಮ ಜಮೀನಿನಿಂದ ಪೈಪುಗಳನ್ನು ಕಿತ್ತು ಹಾಕಿಸುವ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿವೆಯೇ: ಬಂದಿದ್ದಲ್ಲಿ. ಈ ಬಗ್ಗೆ ಯಾವ ಕ್ರಮ ಕೈಗೊಳ್ಳಲಾಗಿದೆ: (ಸಂಪೂರ್ಣ ಮಾಹಿತಿ ನೀಡುವುದು) | ಯೋಜನೆಯ ಕಾಮಗಾರಿಗಳ ನಿರ್ಮಾಣ ಹಂತದಲ್ಲಿ ಸೂಕ್ತ ಗುಣ ನಿಯಂತ್ರಣದೊಂದಿಗೆ ಹಾಗೂ ಸಮರ್ಪಕ Third Party Quality control inspection ನೊಂದಿಗೆ ಕಾಮಗಾರಿಗಳನ್ನು ಕೈಗೆತ್ತಿಕೊಳಲಾಗಿರುತ್ತದೆ. ತದನಂತರ, ಯೋಜನಾ ಕಾಮಗಾರಿಗಳ ನಿರ್ವಹಣೆ ಹಂತದಲ್ಲಿ ಕೆಲವು ನ್ಯೂನತೆಗಳು ಕಂಡು ಬಂದಲ್ಲಿ ಗುತ್ತಿಗೆ ಕರಾರಿನಂತೆ ಮೂಲ ಗುತ್ತಿಗೆದಾರರಿಂದಲೇ ನ್ಯೂನತೆಯನ್ನು ಸರಿಪಡಿಸಲು ಕ್ರಮ ಕೈಗೊಳ್ಳಲಾಗುವುದು. |
| ಊ) | ಪೂರ್ಣಗೊಂಡ ಏತ ನೀರಾವರಿ ಕಾಮಗಾರಿಗಳನ್ನು ಪರಿವೀಕ್ಷಣೆ ಮಾಡಲು ಸರ್ಕಾರದ ಮಟ್ಟದಲ್ಲಿ ಒಂದು ಸಮಿತಿಯನ್ನು ರಚಿಸಿ, ವರದಿಯನ್ನು ಪಡೆಯಲು ಸರ್ಕಾರ ಚಿಂತನೆ ನಡೆಸಿದೆಯೇ? (ಮಾಹಿತಿ ಒದಗಿಸುವುದು) | ಪೂರ್ಣಗೊಂಡ ಏತ ನೀರಾವರಿ ಕಾಮಗಾರಿಗಳಲ್ಲಿ ನ್ಯೂನತೆಗಳು ಕಂಡುಬಂದಲ್ಲಿ ಅಂತಹವುಗಳನ್ನು ತಜ್ಞರವರಿಂದ ಪರಿವೀಕ್ಷಣೆಗೆ ಒಳಪಡಿಸಿ, ವರದಿಯನ್ವಯ ಕ್ರಮ ಜರುಗಿಸಲಾಗುವುದು. |

ಸಂಖ್ಯೆ:ಜಸಂಇ 88 ಡಬ್ಲ್ಯೂಬಿಎಂ 2024

(ಡಿ.ಕೆ. ಶಿವಕುಮಾರ್)
ಉಪ ಮುಖ್ಯಮಂತ್ರಿಗಳು